# ಮೈಸೂರು ರೇಷ್ಮೆ ಸೀರೆ ಸರಿಸಾಟಿ ಯಾವುದಿದೆ?

ಬನಾರಸ್, ಕಾಂಜೀವರಂನಂತಹ ಅದ್ದೂರಿ ಸೀರೆ ಎಷ್ಟೇ ಭರ್ಜರಿಯಾಗಿರಲಿ, ಮೈಸೂರು ರೇಷ್ಮೆಯ ಸೊಬಗೇ ಬೇರೆ. ಸೀರೆಗಳ ರಾಣಿ ಮೈಸೂರು ರೇಷ್ಮೆ ಸೀರೆಗೆ ಮನಸೋಲದ ಮಹಿಳೆಯರಿಲ್ಲ. ಏನಿದರ ಆಕರ್ಷಣೆ, ಏಕಿದಕ್ಕೆ ಇಷ್ಟೊಂದು ಬೇಡಿಕೆ?

■ ಮುಕುಂದ್ ಕಿರಸೂರ್
■ ವೈ.ಸಿ. ರಾಧಾಲಕ್ಷ್ಮಿ

ಪರಿಶುದ್ಧತೆಯ ಪ್ರತೀಕವಾಗಿರುವ ಸರಳ ಸುಂದರ ಮೈಸೂರು ರೇಷ್ಮೆ ಸೀರೆ ಎಂದಿಗೂ ಜಗತ್ಪಸಿದ್ಧ. ಮೈಸೂರು ಕೆ.ಎಸ್.ಐ.ಸಿ ರೇಷ್ಮೆ ಸೀರೆಗಳ ಬಗ್ಗೆ ಯಾರಿಗೆ ಗೊತ್ತಿಲ್ಲ?

ಅಂದಿನ ಮೈಸೂರು ಸಂಸ್ಥಾನದಲ್ಲಿ ಬಹಳಷ್ಟು ಏಳು ಬೀಳುಗಳನ್ನು ಕಂಡ ರೇಷ್ಮೆ ಉದ್ಯಮಕ್ಕೊಂದು ಬಲವಾದ ತಳಹದಿ ನಿರ್ಮಿಸಿ ಯಶಸ್ವಿಯಾದದ್ದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಅವರು ಇಂಗ್ಲೆಂಡಿಗೆ ಹೋದಾಗ ಅಲ್ಲಿನ ಮಿಲ್ ನಿರ್ಮಿತ ಸುಂದರ ರೇಷ್ಮೆ ವಸ್ತ್ರಗಳನ್ನು ನೋಡಿ ಅಂಥದೇ ವಸ್ತ್ರಗಳನ್ನು ಮೈಸೂರಿನಲ್ಲಿಯೂ ತಯಾರಿಸಲು ಅಲ್ಲೇ ನಿರ್ಧರಿಸಿದರು. ಮೈಸೂರು ರಾಜ್ಯದಲ್ಲಿ ಸಮೃದ್ಧವಾಗಿದ್ದ ರೇಷ್ಮೆ ಮತ್ತು ಶ್ರೀಗಂಧದ ಸಂಪತ್ತನ್ನು ಕಾಪಿಡುವಂತೆ ರಾಣಿ ವಿಕ್ಟೋರಿಯಾ ಕೂಡಾ ಅವರಿಗೆ ಸಲಹೆ ನೀಡಿದ್ದರು. ಅವರ ಮಾತಿನಿಂದ ಪ್ರಭಾವಿತರಾದ ಒಡೆಯರ್ 1912ರಲ್ಲಿ ಮೈಸೂರಿನ ರೇಷ್ಮೆ ನೇಯ್ಗೆ ಕಾರ್ಖಾನೆಯನ್ನು ಸ್ಥಾಪಿಸಿ ಮೈಸೂರಿನ ರೇಷ್ಮೆ ಉದ್ಯಮಕ್ಕೊಂದು ಸ್ಪಷ್ಟ ಭಾಷ್ಯವನ್ನು ಬರೆಯುವಲ್ಲಿ ಯಶಸ್ವಿಯಾದರು.

ಪ್ರಾರಂಭದಲ್ಲಿ ಈ ಕಾರ್ಖಾನೆಯ ಉತ್ಪನ್ನಗಳನ್ನು ರಾಜ ಕುಟುಂಬ ಮತ್ತು ಸೇನಾ ಅವಶ್ಯಕತೆಗಳಿಗಾಗಿ ಮಾತ್ರ ಬಳಸಿಕೊಳ್ಳಲಾಗುತ್ತಿತ್ತು. ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿ ಕೆಲವೇ ನೇಯ್ಗೆ ಯಂತ್ರಗಳಿಂದ ಪ್ರಾರಂಭವಾದ ಈ ಕಾರ್ಖಾನೆ ಇಂದೂ ಕೂಡ ಅತ್ಯಂತ ಯಶಸ್ವಿಯಾಗಿ ಓಡುತ್ತಿದೆ. ಮೈಸೂರಿನ ರೇಷ್ಮೆ ಉದ್ಯಮದ ಬೆಳವಣಿಗೆಯ ದಾರಿ ಬಹಳ ರೋಚಕವಾಗಿದ್ದು ರೇಷ್ಮೆ ಇಲ್ಲಿಯೇ ನೆಲೆ ನಿಲ್ಲಲು ಕಾರಣವಾದದ್ದು ಟಾಟಾ ಅವರ ದೂರದರ್ಶಿತ್ವ ಮತ್ತು ಪರಿಶ್ರಮ, ಸರ್ ಎಂ. ವಿಶ್ವೇಶ್ವರಯ್ಯ, ಅಪ್ಪಾದೊರೈ ಮೊದಲಿಯಾರ್, ನವರತ್ನ ರಾಮರಾವ್ ಜತೆಗೆ ವಿನ್ನಿ ಟೊವಾರಂತಹ ಸಾಮಾಜಿಕ ಕಾರ್ಯಕರ್ತರ ಕೊಡುಗೆ!

ಮೊದಲಿನಿಂದಲೂ ಮೈಸೂರು ಅರಸರ ಸುಪರ್ದಿಯಲ್ಲಿದ್ದ ಕಾರ್ಖಾನೆಯ ಜವಾಬ್ದಾರಿಯನ್ನು 1980 ರಿಂದ ಕೆ.ಎಸ್.ಐ.ಸಿಗೆ ವಹಿಸಲಾಯಿತು. ಇಂತಹ ಅತುಲ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸಿ, ಮುಂದಿನ ತಲೆಮಾರಿಗೂ ಅದನ್ನು ಜತನದಿಂದ

